'.....'

'ಯ್ಯ್... ಯಾಕೆ ಮೌನವಾಗಿಬಿಟ್ಟೆ, ಗಂಡೇ? ಏನಾಯಿತು? ನಾಲಗೆ ಹೊರಳುತ್ತಿಲ್ಲವೇನು? ಈ ಆಮ್ರಪಾಲಿಯ ಮಾತು ಸುಳ್ಳೇನು?'

'ಸ್ಸ್... ಸ್ಸಾರಿ... ಏನಿಲ್ಲ. ನಾನು ಅನಗತ್ಯವಾಗಿ ಎಮೋಷನಲ್ ಆಗಿಬಿಟ್ಟೆ...'

'ಇರಲಿ ಬಿಡು... ಈ ವಿಷಯಗಳೆಲ್ಲ ನಿನಗೆ ಬೋರಂತ ಅನಿಸಬಹುದು... ಮಾತು ಶುರು ಮಾಡಿದೆನಾದ್ದರಿಂದ ಪೂರ್ತಿ ಹೇಳಲೇಬೇಕು... ಹೇಳುತೀನಿ ಕೇಳು. ಮೊದಲು ನನ್ನ ಬಗ್ಗೆ. ನಾನು ಆಮ್ರಪಾಲಿ ಅಂದೆನಲ್ಲ... ಎಲ್ಲಿ, ಇನ್ನೊಮ್ಮೆ ಕೈಕೊಡು... ಹ್ಞಾಂ, ಹಾಗೇ... ಹಾಗೇ... ನವ್ ವಿ ಆರ್ ಫ್ರೆಂಡ್ಸ್! ಮುಂದುವರೆಸುತೀನಿ... ನಾನು ಹುಟ್ಟಿದ್ದು ಬೆಳೆದಿದ್ದು ಎಲ್ಲ ಇಲ್ಲೇ.ಮದುವೆ ಆಗಿಲ್ಲ. ಅದರಲ್ಲಿ ನಂಬಿಕೆಯೂ ಇಲ್ಲ. ಓದಿನಲ್ಲಿ ಆಸಕ್ತಿ ಇದೆ. ಬರೀತೀನಿ. ಹಾಡುತೀನಿ... ಹಾಡೋದಕ್ಕಿಂತ ಹಾಡು ಕೇಳೋದರಲ್ಲಿ ಸಿಕ್ಕಾಪಟ್ಟೆ ಆಸ್ಥೆ ಇದೆ. ಇನ್ನುಳಿದಂತೆ, ನೊಮ್ಯಾಡಿಕ್ ಆಗಿ ಬದುಕುತೀನಿ... ನೀನು ನನಗೆ ಸಿಕ್ಕಿದ್ದು ಬಲು ಅಚಾನಕ್ಕಾಗಿ. ಹೇಗೆ ಅಂತ ಹೇಳಿಬಿಡುತೀನಿ...ತಮಿಳಿನ ವೆಂಕಟಕವಿಯ ಅಲೈಪಾಯುದೈ ಹಾಡು ನನಗೆ ಬಲು ಇಷ್ಟವಾದದ್ದು. ಒಂದು ದಿವಸ ಅದರ ಸಾಹಿತ್ಯ ಹುಡುಕುವ ಸಲುವಾಗಿ ಗೂಗಲು ಹೊಕ್ಕಿದ್ದೆ... ಆಗಲೇ ನೀನು ಸಿಕ್ಕಿದ್ದು! ಅಂದರೆ ಈ ಹಾಡಿಗೆ ನಿನ್ನ ಧ್ವನಿಯಿರುವ ಒಂದು ಲಿಂಕ್ ಸಿಕ್ಕಿತು... ಯೂಟ್ಯೂಬ್‌ನಲ್ಲಿ. ಕೇಳಿಸಿಕೊಂಡೆ, ಅಂಡ್ ಐ ಫೆಲ್ ಇನ್ ಲವ್ ವಿತ್ಯು ಇನ್ಸ್ಟಂಟ್ಲೀ! ತಕ್ಷಣವೇ ಮಾರುಹೋಗಿಬಿಟ್ಟೆ. ನಿನ್ನ ಹಾಡಿಗೆ. ಧ್ವನಿಗೆ. ಮತ್ತು ನಿನಗೆ! ಆಸಕ್ತಿಯ ವಸ್ತುವನ್ನು ಹುಡುಕೋದು ಯಾರಿಗೂ ಕಷ್ಟವೇನಲ್ಲ ಬಿಡು. ಫೇಸ್‌ಬುಕ್ಕಿನಲ್ಲಿ, ಟ್ವಿಟರ್‌ನಲ್ಲಿ ನಿನ್ನನ್ನು ಹಿಂಬಾಲಿಸಿದೆ... ನಿನ್ನ ಪದ್ಯಗಳನ್ನು ಓದಿದೆ... ನಿನ್ನನ್ನು ನೋಡಲಿಕ್ಕೆ ನಿನ್ನ ಶೋಗಳಿಗೆಲ್ಲ ಬರತೊಡಗಿದೆ... ಟ್ರಿವೇಂಡ್ರಮ್, ಕ್ಯಾಲಿಕಟ್, ಕೊಚಿನ್, ಕೊಲ್ಲಂ... ಹೀಗೆ ನೀನೆಲ್ಲೆಲ್ಲೇ ಪರ್ಫಾರ್ಮ್ ಮಾಡಿದರೂ ಬರತೊಡಗಿದೆ... ಹುಚ್ಚು ಅನಿಸಬಹುದಲ್ಲವಾ? ಹೌದು. ಇದು ಹುಚ್ಚೇ ಸರಿ! ಇಲ್ಲದಿದ್ದರೆ ನಿನ್ನನ್ನು ನೋಡಲೇಬೇಕನಿಸಿ, ವರ್ಷದ ಹಿಂದೆ ಅಬುಧಾಬಿಯಲ್ಲೊಂದು ಕಾರ್ಯಕ್ರಮ ಇತ್ತಲ್ಲವಾ, ಅಲ್ಲೀವರೆಗೂ ಬಂದಿದ್ದೆ!!'

'!!!'

'ಇಷ್ಟಿದ್ದೂ ನಿನ್ನನ್ನು ಒಂದು ಸಲವೂ ಮಾತಾಡಿಸಬೇಕು ಅಂತ ಅನಿಸಿರಲಿಲ್ಲ... ಅಥವಾ, ಮಾತಾಡೋ ಧೈರ್ಯ ಇರಲಿಲ್ಲ...'

'ಗ್ಸ್...ಗ್ಸಾಡ್...!'

'ಹ್ಞೂಂ... ನಿಜಕ್ಕು ಧೈರ್ಯ ಇರಲಿಲ್ಲ...'

'ಮತ್ತೆ ಇವೊತ್ತು ಎದುರುಸಿಕ್ಕಿದ್ದೇ ಹೀಗೆ ಬಂದು ಹರಿಹಾಯೋದೇ?!'

'ಇರಿರು... ಹೇಳುತೀನಿ... ನನ್ನ ಮನಸ್ಸಿನಲ್ಲಿ ಅದೇನಿತ್ತೋ ಯಾರಿಗೆ ಗೊತ್ತು. ಯಾರಿಗೂ ಯಾವ ಗಂಡಸಿಗೂ ಮನಸೋತಿದ್ದಿರದ ನಾನು ನಿನಗೆ ಮರುಳಾಗಿಬಿಟ್ಟಿದ್ದೆ. ಹುಚ್ಚಾಪಟ್ಟೆ ಪ್ರೀತಿಸತೊಡಗಿದ್ದೆ... ನೀನು ನಿನ್ನ ಖಾಸಗೀ ನೆಲೆಯಲ್ಲಿ ಏನೇ ಆಗಿರು ನಿನ್ನನ್ನೊಮ್ಮೆ ಸೇರಲೇಬೇಕು ಅಂತೆಲ್ಲ ಕನಸಿಕೊಂಡಿದ್ದೆ... ಹೇಗೆ ಹೇಳಿಕೊಳ್ಳೋದು, ಎಲ್ಲಿ ಭೇಟಿ ಮಾಡೋದು ಅಂತೆಲ್ಲ ಕಾಯ್ತಾನೇ ಇದ್ದೆ... ಇಂಟರ್ನೆಟ್‌ನಲ್ಲಿ ನೀನು ಫ್ಲೆನರಿ ಬಗ್ಗೆ ಬರೆದ ಒಂದು ಲೇಖನ ಸಿಕ್ಕಿತು. ಹಾದರ ಮನುಷ್ಯನ ಬೌದ್ಧಿಕತೆಯ ಹಕ್ಕು ಅಂತ ಬರೆದಿದೀಯಲ್ಲ, ಅದು ನನ್ನನ್ನು ಕೆಣಕಿತು... ನನ್ನ ಮನಸ್ಸು ಕೆರಳಿಸಿತು. ಎಷ್ಟು ಸರಿ ಅಂತನ್ನಿಸಿತು. ಮೈ ಇನ್ನೊಂದು ಮೈಯನ್ನ